

**ನೂರಾರು ವರ್ಷ ಬದುಕುವ ಕೆಲವು ಜಾತಿಯ ಆಮೆಗಳು ಹಾಗೂ ವೃಕ್ಷಗಳ ಬಗ್ಗೆ ಕೇಳಿದ್ದೇವೆ. ಆದರೆ, ‘ಬವೋಬಾಬ್’ ಎಂದು ಕರೆಸಿಕೊಳ್ಳುವ ಮರಗಳು ಸಾವಿರಾರು ವರ್ಷಗಳ ಕಾಲ ಜೀವಿಸುತ್ತವೆ.**

ಆಫ್ರಿಕಾ ಖಂಡದ ಕೆಲವು ದೇಶಗಳು ಹಾಗೂ ಮಡಗಾಸ್ಕರ್ ದ್ವೀಪದಲ್ಲಿ ಹೆಚ್ಚಾಗಿ ಕಂಡುಬರುವ ‘ಬವೋಬಾಬ್’ ಹೆಸರಿನ ಮರಗಳದು ಸಾವಿರಾರು ವರ್ಷಗಳ ದೀರ್ಘಾಯುಷ್ಯ. ಅವು ಭೂಮಿಯ ಮೇಲೆ ಬದುಕಿರುವ ಅತ್ಯಂತ ಪ್ರಾಚೀನ ಜೀವಗಳು. ಜಿಂಬಾಬ್ವೆಯಲ್ಲಿದ್ದ ಪಾಂಕೆ ಬವೋಬಾಬ್ ಮರ 2011ರಲ್ಲಿ ಸತ್ತಾಗ, ಅದರ ವಯಸ್ಸು ಬರೋಬ್ಬರಿ 2450 ವರ್ಷ!

ಒಟ್ಟು ಎಂಟು ಜಾತಿಯ ಬವೋಬಾಬ್ ಮರಗಳಿವೆ. ಅವು ಕಡಿಮೆ ನೀರಿರುವ ಒಣ ಪ್ರದೇಶಗಳಲ್ಲಿ ಬೆಳೆಯುತ್ತವೆ. ಅರೇಬಿಯಾ ಹಾಗೂ ಆಸ್ಟ್ರೇಲಿಯಾದಲ್ಲೂ ಕೆಲವು ಬವೋಬಾಬ್ ಮರಗಳಿವೆ. ಭಾರತದಲ್ಲೂ ಮುಂಬೈ ಹಾಗೂ ತಮಿಳುನಾಡಿನಲ್ಲಿ ‘ಆಡನ್ಸೋನಿಯ ಡಿಜಿಟಾಟ’ ಜಾತಿಯ ಕೆಲವೇ ಕೆಲವು ಬವೋಬಾಬ್ ಮರಗಳಿವೆ.

ಸಾವಿರಾರು ವರ್ಷಗಳ ಕಾಲ ಜೀವಿಸುವ ಈ ಮರಗಳನ್ನು ಆಫ್ರಿಕಾ ಹಾಗೂ ಮಡಗಾಸ್ಕರ್ ನಿವಾಸಿಗಳು ಪವಿತ್ರ ಹಾಗೂ ನಿಗೂಢ ವೃಕ್ಷಗಳೆಂದು ನಂಬುತ್ತಾರೆ. ಅಂದಹಾಗೆ, ಈ ಮರಗಳ ಮೂಲ ಅರೇಬಿಯಾ. ಬವೋಬಾಬ್ ಪದ ಅರೇಬಿಕ್ ಪದ ‘ಬುಹಿಹೂಬ್’ನಿಂದ